ಬಸವಕಲ್ಯಾಣ ತಾಲ್ಲೂಕಿನಲ್ಲಿ ಮೀನುಗಾರಿಕೆ ಅಭಿವೃದ್ಧಿ.

2925(3677)

ಶ್ರೀ ಎಂ.ಜಿ.ಮುಳೆ(ಬಸವಕಲ್ಯಾಣ): ಮಾನ್ಯ ಮೀನುಗಾರಿಕೆ, ಬಂದರು ಮತ್ತು ಪ್ರದೇಶಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯಪಟ್ಟು ಉತ್ತರಿಸುವರೆ?

ಅ) ಬಸವಕಲ್ಯಾಣ ತಾಲ್ಲೂಕಿನಲ್ಲಿ ಮೀನುಗಾರಿಕೆ ಅವಕಾಶಗಳು ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದಲ್ಲಿ ಮೀನುಗಾರಿಕೆ ಅಭಿವೃದ್ಧಿಗೆ ಕೈಗೊಂಡಿರುವ ಕ್ರಮಗಳೇನು?

ಆ) ಮೀನು ಉತ್ಪಾದನೆಯ ಪ್ರಮಾಣದ ಅಂದಾಜು ಅಧ್ಯಯನವನ್ನು ನಡೆಸಲಾಗಿದೆಯೇ? ನಡೆಸಿದ್ದಲ್ಲಿ ಒಟ್ಟು ಮೀನು ಉತ್ಪಾದನೆ ಅಂದಾಜು ಎಷ್ಟು?

ಶ್ರೀ ಬಿ.ರಮಾನಾಥ ರೈ (ಮೀನುಗಾರಿಕೆ, ಬಂದರು ಮತ್ತು ಪ್ರದೇಶಾಭಿವೃದ್ಧಿ ಸಚಿವರು):

ಅ) ಹೌದು, ತಾಲ್ಲೂಕಿನಲ್ಲಿರುವ ಮೀನುಗಾರಿಕೆ ಅಭಿವೃದ್ಧಿಗೆ ಯೋಗ್ಯವಾದ ಕೆರೆ ಜಲಾಶಯಗಳಲ್ಲಿ ಮೀನುಮರಿಗಳನ್ನು ಬಿತ್ತನೆ ಮಾಡಿ ಅಭಿವೃದ್ಧಿಪಡಿಸಲಾಗುತ್ತಿದೆ. ಹಾಗೆಯೇ ಮೀನು ಮರಿ ಉತ್ಪಾದನೆ, ಸಾಕಣೆ ಮತ್ತು ಹಂಚಿಕೆ ಪ್ರದರ್ಶನ ಮತ್ತು ತರಬೇತಿ ಮುಂತಾದ ಯೋಜನಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಆ) ಹೌದು, ಬಸವಕಲ್ಯಾಣ ತಾಲ್ಲೂಕಿನ ಮೀನು ಉತ್ಪಾದನೆಯನ್ನು 200 ಮೆಟ್ರಿಕ್ ಟನ್ ಎಂದು ಅಂದಾಜಿಸಲಾಗಿದೆ.

ಬಸವಕಲ್ಯಾಣ ತಾಲ್ಲೂಕನ್ನು ಹಜ್ ಯಾತ್ರಾರ್ಥಿಗಳ ಸಂಪರ್ಕ ಕೇಂದ್ರವನ್ನು ಸ್ಥಾಪಿಸುವುದು.

2926(3678)

ಶ್ರೀ ಎಂ.ಜಿ.ಮುಳೆ(ಬಸವಕಲ್ಯಾಣ): ಮಾನ್ಯ ಪ್ರವಾಸೋದ್ಯಮ ಮತ್ತು ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯಪಟ್ಟು ಉತ್ತರಿಸುವರೆ?

1. ಬಸವಕಲ್ಯಾಣ ಪಟ್ಟಣ ಹಾಗೂ ತಾಲ್ಲೂಕಿನಲ್ಲಿ ಅಲ್ಪ ಸಂಖ್ಯಾತ ಜನರಾದ ಮುಸ್ಲಿಂ ಜನಾಂಗದವರ ಸಂಖ್ಯೆ ಹೆಚ್ಚಾಗಿರುವುದರಿಂದ ಹಾಗೂ ಹಜ್ ಯಾತ್ರಾರ್ಥಿಗಳ

ಸಂಖ್ಯೆ ದಿನೇ ದಿನೇ ಹೆಚ್ಚಾಗುತ್ತಿರುವುದರಿಂದ ಸಂಪರ್ಕ ಕೇಂದ್ರವನ್ನು ಸ್ಥಾಪಿಸುವುದು ಅವಶ್ಯಕ ಎಂದು ಸರ್ಕಾರದ ಗಮನಕ್ಕೆ ಬಂದಿದೆಯೇ?

2. ಬಂದಿದ್ದಲ್ಲಿ ಯಾವಾಗಿನಿಂದ ಹಜ್ ಯಾತ್ರಾರ್ಥಿಗಳ ಸಂಪರ್ಕ ಕೇಂದ್ರವನ್ನು ಸ್ಥಾಪಿಸಲಾಗುವುದು?

ಶ್ರೀ ಆರ್. ರೋಷನ್ ಬೇಗ್ (ಪ್ರವಾಸೋದ್ಯಮ ಮತ್ತು ಹಜ್ ಸಚಿವರು):

1. ಇಲ್ಲಾ.

2. ಉದ್ಭವಿಸುವುದಿಲ್ಲ.

ಹುಣಸೂರು ತಾಲ್ಲೂಕಿನ ಗಿರಿಜನರಿಗೆ ಅರಣ್ಯ ಭೂಮಿಯನ್ನು ವಿತರಿಸುವುದು.

2927(3684)

ಶ್ರೀ ಪಾಪಣ್ಣ ವಿ.(ಹುಣಸೂರು): ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಣಸೂರು ತಾಲ್ಲೂಕಿನ ಗಿರಿಜನರಿಗೆ ಭೂಮಿತಿಯನ್ನು ವಿತರಿಸಲು ಸರ್ಕಾರಿ ಜಮೀನು ಎಲ್ಲೆಲ್ಲಿ ಇದೆ ಎಂಬ ಬಗ್ಗೆ ಸರ್ಕಾರವು ಆದೇಶಿಸಿದೆಯೇ?

ಆ) ಈ ಬಗ್ಗೆ ಕಂದಾಯ ಇಲಾಖೆಯವರು ಕಂದಾಯ ಭೂಮಿ ಎಂದು ಗುರ್ತಿಸಿ ಲಭ್ಯವಿದೆ ಎಂದು ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿರುವರೆ?

ಇ) ಕಂದಾಯ ಇಲಾಖೆಯವರು ಗುರ್ತಿಸಿರುವ ಭೂಮಿಯನ್ನು ಅರಣ್ಯ ಇಲಾಖೆಯವರು ನಮಗೆ ಸೇರಿದೆ ಎಂದು, ಅಲ್ಲಿ ಹಿಂದಿನಿಂದ ವ್ಯವಸಾಯ ಮಾಡುತ್ತಿದ್ದು, ಹಕ್ಕು ಪತ್ರವನ್ನು ಪಡೆದಿರುವ ರೈತರಿಗೆ ಅರಣ್ಯ ಇಲಾಖೆಯವರು ಅನಾವಶ್ಯಕವಾಗಿ ಮಧ್ಯ ಪ್ರವೇಶಿಸಿ ತೊಂದರೆಯನ್ನು ನೀಡುತ್ತಿರುವುದು ನಿಜವಲ್ಲವೆ?

ಈ) ಕಂದಾಯ ಇಲಾಖೆಯವರು ಹಾಗೂ ಅರಣ್ಯ ಇಲಾಖೆಯವರು ಪರಸ್ಪರವಾಗಿ ವಿರುದ್ಧ ನಿಲುವುಗಳನ್ನು ತಾಳಿರುವುದು ಸತ್ಯವಲ್ಲವೆ?

ಉ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದ ಕ್ರಮವೇನು?

ಶ್ರೀ ಕೆ.ಎಚ್. ರಂಗನಾಥ್ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):